
# ಬೆಳಕಿನ ಸಂಚಲನ

ಸಂಪುಟ 5, ಸಂಚಿಕೆ 2 | ದ್ವೈಮಾಸಿಕ ವಾರ್ತಾಪತ್ರ | ಮಾರ್ಚ್–ಏಪ್ರಿಲ್ 2017



**ಗುರೂಜಿ ಕೃಷ್ಣಾನಂದ (1939-2012)**

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷ ಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ 20ನೇ ಮೇ 2012ರ ಭಾಷಣದ ಆಯ್ದ ಭಾಗಗಳು)

**ಅನು: ಶ್ರೀದೇವಿ**

ಇಂದಿನಿಂದ ಯಾವುದರ ಬಗೆಗಾದರೂ ದೂರುವುದನ್ನು ನಿಲ್ಲಿಸೋಣ. ನಮ್ಮ ವ್ಯವಸ್ಥೆಗಳ ಬಗೆಗೆ ದೂರುವುದರಿಂದಾಗಲೀ, ಆಕ್ಷೇಪಣೆ ಮಾಡುವುದರಿಂದಾಗಲೀ ಹಾಗೂ ಜಿಗುಪ್ಸೆ ಪಡುವುದರಿಂದಾಗಲೀ ಯಾವ ಪ್ರಯೋಜನವೂ ಇಲ್ಲ. ದೂರುವುದನ್ನು ನಿಲ್ಲಿಸೋಣ ಆದರೆ ಈ ವ್ಯವಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ಲೈಟ್ ಚಾನಲ್ ಮಾಡುವುದನ್ನು ಪ್ರಾರಂಭಿಸೋಣ. ಇದು ಬಹಳ ಮುಖ್ಯವಾದ ವಿಷಯವೆಂದು ನನಗನ್ನಿಸುತ್ತದೆ. ಸಹಜವಾಗಿಯೇ ನಾವು ಯಾವಾಗಲೂ ಬೇರೆಯವರ ಮೇಲೆ ಆಪಾದನೆಯನ್ನು ಮಾಡುತ್ತೇವೆ. ಅಪ್ಪಿ ತಪ್ಪಿ ಕೆಲವೊಮ್ಮೆ ನಮ್ಮನ್ನೂ ಆಕ್ಷೇಪಿಸಿಕೊಳ್ಳುತ್ತೇವೆ, ಖಂಡಿಸಿಕೊಳ್ಳುತ್ತೇವೆ. ಇದನ್ನು ನಾವು ಮಾಡುವುದು ಬೇಡ. ಆಪಾದನೆ ಮಾಡುವುದನ್ನು ನಿಲ್ಲಿಸೋಣ ಮತ್ತು ಲೈಟ್ ಚಾನಲ್ ಮಾಡುವುದನ್ನು ಪ್ರಾರಂಭಿಸೋಣ.

ಬೆಳಕನ್ನು ಚಾನಲ್ ಮಾಡಿದಾಗ ಬದಲಾವಣೆಗಳನ್ನು ನಾವು ತರಬಹುದು ಎನ್ನುವುದು ನಮಗೆ ತಿಳಿದಿದೆ. ವಿನಾಶವನ್ನು ಸಂಪೂರ್ಣವಾಗಿ ತಡೆಯಬಹುದು. ನಾನು ಹೇಳುತ್ತಿರುವುದರಲ್ಲಿ ಅತಿಶಯವೇನಿಲ್ಲ. ನಾನು ಏನು ಹೇಳುತ್ತಿದ್ದೇನೆಂದು ನನಗೆ ತಿಳಿದಿದೆ. ನಾವು ವಿನಾಶವನ್ನು ಸಂಪೂರ್ಣವಾಗಿ ತಡೆಯಬಹುದು ಅಥವಾ ಕೊನೆಯ ಪಕ್ಷ ಕಡಿಮೆ ಮಾಡಬಹುದು.

ನಾವು ಪರಿವರ್ತನೆಗೊಳ್ಳೋಣ. ಅದೇ ಮೊದಲ ಅವಶ್ಯಕತೆ. ನಾವು ಬದಲಾಗೋಣ. ನಂತರ ವ್ಯವಸ್ಥೆಗಳು ತಾನೇ ತಾನಾಗಿ ಬದಲಾಗುತ್ತವೆ. ನೀವು ಬದಲಾದರೆ, ನಿಮ್ಮ ಸುತ್ತಲಿನ ವ್ಯಕ್ತಿಗಳೂ ಕೂಡ ಬದಲಾಗುತ್ತಾರೆ. ಇದನ್ನು ನೀವು ಪರೀಕ್ಷಿಸಬಹುದು. ವ್ಯವಸ್ಥೆಗಳೆಲ್ಲವೂ ವ್ಯಕ್ತಿಗಳಿಂದಲೇ ಮಾಡಲ್ಪಟ್ಟಿವೆ. ಆದ್ದರಿಂದ, ವ್ಯಕ್ತಿಗಳು ಬದಲಾದಾಗ, ವ್ಯವಸ್ಥೆಗಳೂ ಬದಲಾಗುತ್ತವೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಯಾವುದೇ ಪ್ರಚಾರವಿಲ್ಲದಿದ್ದರೂ ಸಹ ನಮ್ಮ ಕಾರ್ಯಕರ್ತರು 10 ಲಕ್ಷ ಮಕ್ಕಳನ್ನು ತಲುಪಿ ವಿಶ್ವ ಚಾನಲ್ಸ್ ದಿನದಂದು ಲೈಟ್ ಚಾನಲ್ ಮಾಡುವಂತೆ ಅವರನ್ನು ಪ್ರೇರೇಪಿಸಿದ್ದಾರೆ. ಈ ಸದ್ದಿಲ್ಲದ ಸಂಚಲನವನ್ನು ಹರಡುವುದಕ್ಕಾಗಿ ಸದ್ದಿಲ್ಲದ ಕಾರ್ಯಕರ್ತರು ಮಾಡಿದ ಸದ್ದಿಲ್ಲದ ಶ್ರಮದ ಪ್ರತಿಫಲ ಇದಾಗಿದೆ.

ಜಾಗತಿಕ ಒಳಿತಿಗಾಗಿ ಮಾಡಿದ ಯಾವುದೇ ಕೆಲಸವನ್ನು ನಿಸ್ವಾರ್ಥ ಉದ್ದೇಶದಿಂದ ಮಾಡಿದಾಗ ವಿಶ್ವದಿಂದ ವಿಶೇಷ ಸಹಾಯ ದೊರೆಯುತ್ತದೆ. ಅಂತಹ ಪ್ರಯತ್ನಗಳನ್ನು ಗುರುತಿಸಲು ವಿಶ್ವವು ವಿಶೇಷವಾದ ಬುದ್ಧಿಶಕ್ತಿಯನ್ನು ಹೊಂದಿದೆ ಹಾಗೂ ಅಂತಹ ಪ್ರಯತ್ನಗಳನ್ನು ಬೆಂಬಲಿಸಲು ಅದು ವಿಶೇಷವಾದ ಶಕ್ತಿಯನ್ನು ಹೊಂದಿದೆ. ಈ ವಿಶ್ವ ಚಾನಲ್ಸ್ ದಿನದಂದು ತನ್ನದೇ ಆದ ಅನೇಕ ವಿಶೇಷವಾದ ರೀತಿಗಳಲ್ಲಿ ನಮಗೆ ಸಹಾಯ ಮಾಡುವುದರ ಮೂಲಕ ವಿಶ್ವವು ತನ್ನ ಬೆಂಬಲದ ಭರವಸೆಯನ್ನು ಮತ್ತೊಮ್ಮೆ ನೀಡಿದೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಋಷಿಗಳು ಹಾಗೂ ಉನ್ನತಲೋಕದ ಮಾಸ್ಟರ್‌ಗಳ ಕೃಪೆಯಿಂದ 7ನೇ ವಿಶ್ವ ಚಾನಲ್ಸ್ ದಿನವು ಯಶಸ್ವಿಯಾಯಿತು. ಪ್ರತಿಯೊಂದು ಹೆಜ್ಜೆಯಲ್ಲೂ ವಿಶ್ವದಿಂದ ಸಹಾಯ ದೊರೆಯಿತು. ಯಶಸ್ಸಿನ ಹಾದಿಯಲ್ಲಿ ಅನೇಕ ಅಡ್ಡಿ ಆತಂಕಗಳು ಹಾಗೂ ಸವಾಲುಗಳು ಎದುರಾದರೂ ಕೂಡ ಅಂತಿಮವಾಗಿ ಬೆಳಕು ಯಶಸ್ವಿಯಾಯಿತು.

ಆ ಇಡೀ ದಿನ ಒಂದು ವರಪ್ರಸಾದದಂತೆ ತೋರಿತು. ನಿಖರವಾದ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸುವ ದಿನವಾಗಿತ್ತು. ಈ ದಿನವನ್ನು ಯಶಸ್ವಿಗೊಳಿಸಲು ನಮ್ಮ ನಿಷ್ಠಾವಂತ ಕಾರ್ಯಕರ್ತರು ತಮ್ಮ ಸರ್ವಶಕ್ತಿಯನ್ನು ವಿನಿಯೋಗಿಸಿದರು. ಅವರು ಮಹರ್ಷಿ ಅಮರರವರಿಗೆ ಅವರ ಹುಟ್ಟುಹಬ್ಬದ ದಿನದಂದು ಒಂದು ಸೂಕ್ತವಾದ ಉಡುಗೊರೆಯನ್ನು ಅರ್ಪಿಸಿದರು.

ಈ ದಿನವನ್ನು ಒಂದು ಸಂತೋಷಭರಿತ ದಿನವನ್ನಾಗಿ ಮಾಡಿದ ಶಾಲಾ ಅಧಿಕಾರಿಗಳಿಗೆ, ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಎಲ್ಲಾ ಲೈಟ್ ಚಾನಲ್‌ಗಳಿಗೆ ನಾವು ವಂದಿಸುತ್ತೇವೆ. ವಿಶ್ವ ಚಾನಲ್ಸ್ ದಿನವು ನಮ್ಮ ಹೃದಯಗಳಲ್ಲಿ ಅಚ್ಚಳಿಯದ ನೆನಪಾಗಿ ಯಾವಾಗಲೂ ಉಳಿಯುತ್ತದೆ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.
ಫೋನ್: (080) 2846 5280, 99000 75280 (10am to 5pm), ಇ–ಮೇಲ್: info@lightagemasters.com
website : www.lightagemasters.com, www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಾಗಿಲ್ಲ.

### ಬೆಂಗಳೂರು

**ಸೋಮವಾರದಿಂದ ಶುಕ್ರವಾರದವರೆಗೆ (ಸಂಜೆ 7 - 7.15)**
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

**ಸೋಮವಾರ (ಸಂಜೆ 6.30 - 7)**
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಬುಧವಾರ (ಸಂಜೆ 6.30 - 7)**
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಶುಕ್ರವಾರ (ಸಂಜೆ 6.30 - 7)**
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ ಭೋಸೆಕರ್

**ಶನಿವಾರ (ಸಂಜೆ 6.30 - 7)**
ಬಲಮುರಿ ಮಹಾಗಣಪತಿ, ಶ್ರೀ ರಾಜರಾಜೇಶ್ವರಿ ಮತ್ತು ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನ,
8ನೇ ಅಡ್ಡರಸ್ತೆ, ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸ್ಯಾಟ್‌ಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ–ಮೇಲ್ info@lightagemasters.com ಗೆ ಬರೆಯಿರಿ.



2017ರ ವಿಶ್ವ ಚಾನಲ್ಸ್ ದಿನದ ಯಶಸ್ಸನ್ನು ಕಾರ್ಯಕರ್ತರು ಆಚರಿಸಿದರು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಒಂದು ಬಾಗಿಲು ಮುಚ್ಚಿದಾಗ, ಇನ್ನೊಂದು ಬಾಗಿಲು ತೆರೆಯಲು ಕಾಯುತ್ತಿರುತ್ತದೆ. ಒಂದು ವೈಫಲ್ಯವು ಅಂತ್ಯವೇನಲ್ಲ. ಪ್ರಾಯಶಃ, ನಾವು ವೈಫಲ್ಯಗೊಂಡಿದ್ದೇ ಒಳ್ಳೆಯದೆನಿಸುತ್ತದೆ, ಅದರಿಂದಾಗಿ ನಮಗೆ ಇನ್ನೂ ಉತ್ತಮವಾದ ಅವಕಾಶವೊಂದು ಸಿಗುತ್ತದೆ.
- ಬೆಳಕನ್ನು ಅನುಭವಿಸಿದ ಮೇಲೆ, ನಮ್ಮ ಆಲೋಚನೆಗಳು, ಭಾವನೆಗಳು ಹಾಗೂ ಕಾರ್ಯಗಳು ವಿಶ್ವಾತ್ಮಕವಾಗುತ್ತವೆ. ಸಂಪೂರ್ಣ ಶಾಂತಿಯಿರುತ್ತದೆ ಹಾಗೂ ಸಂಘರ್ಷಣೆ ಅಥವಾ ಸಮಸ್ಯೆಗಳಿರುವುದಿಲ್ಲ.
- ವಿನಮ್ರತೆ ಎನ್ನುವ ಒಂದೇ ಒಂದು ಅಂಶವು ಯಾವುದೇ ಗೊಂದಲ ಅಥವಾ ಪ್ರಯಾಸವಿಲ್ಲದೆ ನಮ್ಮನ್ನು ನೇರವಾಗಿ ದೇವರೆಡೆಗೆ ಕೊಂಡೊಯ್ಯುತ್ತದೆ.
- ನಾವು ಇತರರನ್ನು ಕ್ಷಮಿಸುವುದರಿಂದ ದೇವರ ಕ್ಷಮೆಗೆ ಪಾತ್ರರಾಗುತ್ತೇವೆ.
- ಜೀವನದ ಬಗ್ಗೆ ಆಕ್ಷೇಪಣೆ ಹಾಗೂ ಆಪಾದನೆಗಳನ್ನು ಮಾಡದೆ ಬದುಕುವುದೇ ಸಂತೃಪ್ತಿ.
- ಅಹಿಂಸೆಯು ಯಾವುದೇ ಮಟ್ಟದಲ್ಲಿ ನೋವನ್ನುಂಟುಮಾಡದೇ ಇರುವುದು ಮಾತ್ರವಲ್ಲ, ಇದು ಎಲ್ಲರನ್ನೂ ಹಾಗೂ ಇಡೀ ಸೃಷ್ಟಿಯನ್ನು ಪ್ರೀತಿ ಹಾಗೂ ಕರುಣೆಯಿಂದ ಕಾಣುವುದು ಕೂಡ ಆಗಿದೆ.
- ನಾವು ಪ್ರೀತಿಯಿಂದ ಕೂಡಿದವರಾಗಿದ್ದಾಗ, ಬೇರೆಯವರನ್ನು ಗೌರವಿಸುತ್ತೇವೆ, ಜೀವನವನ್ನು ಗೌರವಿಸುತ್ತೇವೆ, ಎಲ್ಲವನ್ನೂ ಗೌರವಿಸುತ್ತೇವೆ.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5133 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 27.78 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | : | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | : | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

# 7ನೇ ವಿಶ್ವ ಚಾನಲ್ಸ್ ದಿನ

ಮನೋಜ್ ಚೋಪ್ರ; ಅನು: ಶ್ರೀದೇವಿ

ಪ್ರತಿ ವಿಶ್ವ ಚಾನಲ್ಸ್ ದಿನವೂ ವಿಭಿನ್ನವಾಗಿರುತ್ತದೆ ಹಾಗೂ ವಿಶೇಷವಾಗಿರುತ್ತದೆ. ಆದರೆ ಈ 7ನೇ ವಿಶ್ವ ಚಾನಲ್ಸ್ ದಿನ ವಿಶಿಷ್ಟವಾಗಿತ್ತು. ಕಾರಣ, ನಂಬಲಾರದ ರೀತಿಯಲ್ಲಿ ಅನೇಕ ಯುವ ಹಾಗೂ ಉತ್ಸಾಹಿ ಕಾರ್ಯಕರ್ತರು ಭಾಗವಹಿಸಿ, ಈ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರ ಮೂಲಕ ಲೈಟ್ ಚಾನಲಿಂಗ್ ತಂಡಕ್ಕೆ ನವೋತ್ಸಾಹವನ್ನು ತುಂಬಿದರು.

ವಿಶ್ವ ಚಾನಲ್ಸ್ ದಿನವು ಭಾವುಕತೆಯ ದಿನವಾಗಿದೆ. ಇದು ಈ ಭೂಮಿಯ ಮೇಲೆ ಪ್ರೀತಿ ಮತ್ತು ಶಾಂತಿಯನ್ನು ಹರಡುವ ದಿನವಾಗಿದೆ. ಹಾಗೂ, ಆನಂದ ಮತ್ತು ಸಂತೋಷವನ್ನು ಆಚರಿಸುವ ದಿನ ಕೂಡ ಆಗಿದೆ.

ಈ ದಿನದ ಬಗ್ಗೆ ನಮ್ಮ ಕಾರ್ಯಕರ್ತರು ಬಹಳ ಉತ್ಸುಕರಾಗಿದ್ದರು. ಪ್ರತಿಯೊಂದು ತಂಡದಲ್ಲೂ ಸಂತೋಷ ಹಾಗೂ ಬಾಂಧವ್ಯದ ಅಲೆಗಳಿರುವ ಅನುಭವ ನಮಗಾಯಿತು. ವಿಶ್ವ ಚಾನಲ್ಸ್ ದಿನಕ್ಕೆ ಒಂದೂವರೆ ತಿಂಗಳಷ್ಟು ಮುಂಚಿತವಾಗಿಯೇ ನಮ್ಮ ಕಾರ್ಯಕರ್ತರು ಈ ವಿಶೇಷವಾದ ದಿನದ ಬಗ್ಗೆ ತಿಳಿಸಲು ಶಾಲೆಗಳಿಗೆ ಭೇಟಿ ನೀಡಲು ಪ್ರಾರಂಭಿಸಿದರು. ಲೈಟ್ ಚಾನಲಿಂಗ್‌ಅನ್ನು ಸ್ವತಃ ಶಾಲಾ ನಾಯಕರುಗಳೇ ನಡೆಸಲು ಅವರಿಗೆ ಬೇಕಾದ ತರಬೇತಿ ನೀಡಿದರು. ನಮ್ಮ ಪ್ರಾದೇಶಿಕ ಸಂಘಟಕರು (Area co-ordinators) ನೂರಾರು ಶಿಕ್ಷಕರಿಗೆ ಬೆಳಕನ್ನು ಚಾನಲ್ ಮಾಡುವುದನ್ನು ಕಲಿಸಿದರು. ಅವರು ಸುಮಾರು 2000 ಶಾಲೆಗಳಿಗೆ ಭೇಟಿ ನೀಡಿದರು. ಕಾರ್ಯಕರ್ತರ ಪ್ರಾಮಾಣಿಕತೆ ಮತ್ತು ನಿಸ್ವಾರ್ಥತೆಯು ಶಾಲಾ ಅಧಿಕಾರಿಗಳ ಮನಮುಟ್ಟಿತು. ಅವರು ತಾವೇ ಸ್ವತಃ ಲೈಟ್ ಚಾನಲಿಂಗ್ ಸೆಷನ್‌ಅನ್ನು ನಡೆಸಲು ಮನಸಾರೆ ಒಪ್ಪಿಗೆ ನೀಡಿದರು. ಅನೇಕ ಶಾಲೆಗಳವರು ಲೈಟ್ ಚಾನಲಿಂಗ್ ಸೆಷನ್‌ಅನ್ನು ನಡೆಸಲು ನಮಗೆ ಆಹ್ವಾನ ನೀಡಿದರು.

ವಿಶ್ವ ಚಾನಲ್ಸ್ ದಿನದಂದು ಬೆಂಗಳೂರಿನಿಂದ ಸುಮಾರು 50–60 ಕಿ.ಮೀ ದೂರದಲ್ಲಿರುವ ಸ್ಥಳಗಳಲ್ಲಿ ಲೈಟ್ ಚಾನಲಿಂಗ್ ಮಾಡಿಸಲು ಬೆಂಗಳೂರಿನ ಕೆಲವು ತಂಡಗಳು ಯೋಜನೆಯನ್ನು ಮಾಡಿದರು. ಅನೇಕ ಕಾರ್ಯಕರ್ತರು ತಾವು ಹೋಗಬೇಕಾದ ಸ್ಥಳಗಳನ್ನು ತಲುಪುವುದಕ್ಕಾಗಿ ಬಹು ಬೇಗನೇ ಹೊರಟರು. ಆ ದಿನ, ಲೈಟ್ ಚಾನಲಿಂಗ್ ನಡೆದ ಬಗ್ಗೆ ಮೊದಲ ವಾರ್ತೆ ದೆಹಲಿಯಿಂದ ಸುಮಾರು ಬೆಳಿಗ್ಗೆ 8 ಗಂಟೆಗೆ ಬಂದಿತು; ಅಲ್ಲಿ ಅತಿಯಾದ ಚಳಿ ಮತ್ತು ಮಂಜು ಮುಸುಕಿದ್ದರೂ ಸಹ ಮಕ್ಕಳು ಬೆಳಕನ್ನು ಚಾನಲ್ ಮಾಡಿದರು. ನಿಧಾನವಾಗಿ ಬೆಳಕಿನ ಅಲೆಗಳು ಭಾರತದಾದ್ಯಂತ ಹರಡಿತು ನಂತರ ನಮ್ಮ ಭೂತಾಯಿಯ ಮೇಲೆ ಆವರಿಸಿತು. ಬೆಂಗಳೂರು ಮಾತ್ರವಲ್ಲದೆ, ಮೈಸೂರು, ಹೈದ್ರಾಬಾದ್, ವಿಶಾಖಪಟ್ಟಣ, ಮಧುರೈ, ಚೆನ್ನೈ, ಪುಣೆ, ಮುಂಬೈ, ಅಮರಾವತಿ, ಸಾಂಗ್ಲಿ, ಮೊಹೋಲ್‌ಗಳಲ್ಲಿ ಹಾಗೂ ಮಹಾರಾಷ್ಟ್ರ, ತಮಿಳುನಾಡು, ರಾಜಾಸ್ಥಾನ, ಉತ್ತರಪ್ರದೇಶ, ಮಧ್ಯಪ್ರದೇಶ ಮತ್ತು ಗುಜರಾತಿನ ಅನೇಕ ಸ್ಥಳಗಳಲ್ಲಿ ಬೆಳಕನ್ನು ಚಾನಲ್ ಮಾಡಲಾಯಿತು.

ಈ ಸಂಚಲನಕ್ಕಾಗಿ 190ಕ್ಕೂ ಹೆಚ್ಚು ಕಾರ್ಯಕರ್ತರು ತಮ್ಮ ಸರ್ವಶಕ್ತಿಯನ್ನು ನೀಡಿದರು. ಅನೇಕ ಕಾರ್ಯಕರ್ತರು ರಜೆ ಪಡೆದು ಇಡೀ ದಿನ ಕೆಲಸ ಮಾಡಿದರು. ಕೆಲಸದ ಒತ್ತಡದಿಂದಾಗಿ ರಜೆ ಪಡೆಯಲು ಸಾಧ್ಯವಾಗದ ಕೆಲವು ಕಾರ್ಯಕರ್ತರು ಬೆಳಗಿನ ಲೈಟ್ ಚಾನಲಿಂಗ್ ಸೆಷನ್‌ಗಳನ್ನು ಮುಗಿಸಿ ನಂತರ ಕೆಲಸಕ್ಕೆ ಹೋದರು. ಅತಿ ಹೆಚ್ಚು ಬೆಳಕನ್ನು ಕೆಳಗೆ ತರುವುದು ಅವರ ಉದ್ದೇಶವಾಗಿತ್ತು. ಶಾಲಾ ಅಧಿಕಾರಿಗಳು, ಶಿಕ್ಷಕರು ಹಾಗೂ ಮಕ್ಕಳ ನಾಯಕರುಗಳ ಸಹಾಯದಿಂದಾಗಿ ಲೈಟ್ ಚಾನಲಿಂಗ್ ತಂಡವು 2400ಕ್ಕೂ ಅಧಿಕ ಶಾಲೆಗಳಲ್ಲಿನ 10 ಲಕ್ಷಕ್ಕೂ ಹೆಚ್ಚು ಮಕ್ಕಳಿಂದ ಲೈಟ್ ಚಾನಲ್ ಮಾಡಿಸಲು ಸಾಧ್ಯವಾಯಿತು. ಬಹಳ ತೃಪ್ತಿ ನೀಡುವ ವಾರ್ತೆಯೆಂದರೆ, ಲೈಟ್ ಚಾನಲಿಂಗ್ ಮಾಡಿದ ನಂತರ ಅನೇಕ ಶಾಲೆಗಳು ತಾವು ಭಾಗವಹಿಸಿದ್ದನ್ನು ಇಮೇಲ್, ಪತ್ರಗಳು ಮತ್ತು ಫೋಟೋಗಳನ್ನು ಕಳುಹಿಸುವ ಮೂಲಕ ದೃಢಪಡಿಸಿದರು. ಲೈಟ್ ಚಾನಲಿಂಗ್ ಬಗ್ಗೆ ನಾವು SMS ಮೂಲಕ ಕಳುಹಿಸಿದ ಮಾಹಿತಿಯನ್ನು ಪಡೆದ ಸಾವಿರಾರು ಜನರು ಈ ಸಂದರ್ಭದಲ್ಲಿ ಭಾಗವಹಿಸಿದರು. ಬೆಂಗಳೂರು, ರಾಜಾಸ್ಥಾನ ಹಾಗೂ ಗುಜರಾತಿನಲ್ಲಿ ಕೆಲವು ಸಮೂಹಗಳು 7 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡುವುದರ ಮೂಲಕ ಭಾಗವಹಿಸಿದವು.

ಅಪ್ರೀತಿ ಮತ್ತು ಹಿಂಸೆಯಿಂದ ನಮ್ಮ ಭೂಮಾತೆಯ ಮೇಲೆ ಉಂಟಾದ ಗಾಯಗಳನ್ನು ಈ ಲೈಟ್ ಚಾನಲಿಂಗ್ ವಾಸಿ ಮಾಡಲಿ. ಕತ್ತಲ ಯುಗವನ್ನು ಮೀರಿ ಹೊಸಯುಗದೆಡೆಗೆ ಹೋಗ ಬಯಸುವ ಎಲ್ಲಾ ಆತ್ಮಗಳಿಗೂ ಈ ಚಾನಲಿಂಗ್ ತೃಪ್ತಿ ಹಾಗೂ ಸಮಾಧಾನವನ್ನು ನೀಡಲಿ. ಈ ಪ್ರಪಂಚದ ಮೇಲೆ ಶಾಂತಿ ಮತ್ತು ಪ್ರೀತಿಯು ಮತ್ತೊಮ್ಮೆ ನೆಲೆಸಲಿ.

ಈ ಸಂಚಲನವನ್ನು ವಿಸ್ತರಿಸಲು ನಮಗೆ ಸಹಾಯ ಮಾಡಿದ ಪ್ರತಿಯೊಬ್ಬರಿಗೂ ನಮ್ಮ ಧನ್ಯವಾದಗಳು. ನಮ್ಮ ಕಾರ್ಯಕರ್ತರನ್ನು ಹಾಗೂ ಈ ಸಂಚಲನವನ್ನು ಬೆಂಬಲಿಸಿದ ಶಾಲಾ ಅಧಿಕಾರಿಗಳಿಗೆ, ಶಿಕ್ಷಕರಿಗೆ, ಮುಖ್ಯೋಪಾಧ್ಯಾಯರುಗಳಿಗೆ, ಪ್ರಿನ್ಸಿಪಾಲರುಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಮಾನಸ ಸಂಸ್ಥೆಯ ಪರವಾಗಿ ನಾವು ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಯಾವುದಾದರೊಂದು ಲೈಟ್ ಚಾನಲಿಂಗ್ ಕೇಂದ್ರದಲ್ಲಿ ವಾರಕ್ಕೆ ಒಮ್ಮೆ ಲೈಟ್ ಚಾನಲ್ ಮಾಡಲು ದಯವಿಟ್ಟು ನಮ್ಮ ಜೊತೆಗೂಡಿ ಹಾಗೂ ಶಾಂತಿ ಮತ್ತು ಪ್ರೀತಿಯ ಕಂಪನಗಳನ್ನು ಹರಡಲು ಮತ್ತು ಬಲಗೊಳಿಸಲು ಸಹಾಯ ಮಾಡಿ. ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿ ಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳ ಬಹುದು.

### ಸೋಲಾಪೂರ್

**ಪ್ರತಿದಿನ (ಸಂಜೆ 7 - 7.30)**

ಬಾಲಗಣೇಶ್ ಮಂದಿರ, ಬುಶರ್ ಪೇಠ್, ಮೊಹೋಲ್

☎ 09860967066 ಶ್ರೀ ವಿವೇಕಾನಂದ ಸ್ವಾಮಿ

☎ 09970800279 ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ

**ಭಾನುವಾರ (ಬೆಳಿಗ್ಗೆ 10 - 10.30)**

ನಂ. 481, ಸಾಯಿಪ್ರೇಮ್, 19ನೇ ರಸ್ತೆ, 4ನೇ ಸೆಕ್ಟರ್, ಕೆ. ಕೆ. ನಗರ

☎ 9444880409 ಶ್ರೀಮತಿ ರಾಜಲಕ್ಷ್ಮಿ ಆರ್

### ಪುಣೆ

**ಶನಿವಾರ (ಸಂಜೆ 4 - 4.30)**

3B, ಕಪಿಲ ಹೌಸಿಂಗ್ ಸೊಸೈಟಿ, ಗೋಖಲೆನಗರ

☎ 9011038169 ಶ್ರೀ ಆಶುತೋಶ್ ನವನ್‌ಗುಲ್

### ಮೀರಜ್

**ಗುರುವಾರ (ಸಂಜೆ 7.45)**

ಶ್ರೀ ಶಿವರುದ್ರ ಬಿ. ಬೆಲಗನ್ವಿ

C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ

A-Gat Plot No-135, ಸುಭಾಶ್ ನಗರ ಪೋಸ್ಟ್

☎ 9822421463 ಶ್ರೀ ಮಹಾಜನ್

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯ ಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವ ಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



## ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ಶ್ರೀದೇವಿ

ನಮ್ಮ ಶಾಲೆಯಲ್ಲಿ ಪ್ರತಿ ದಿನ ವಿದ್ಯಾರ್ಥಿಗಳು 15 ನಿಮಿಷ ಲೈಟ್ ಚಾನಲ್ ಮಾಡುತ್ತಾರೆ. ಅವರಲ್ಲಿ ಈಗ ವಿಶ್ವಾಸ ಮೂಡಿದೆ. ಅವರು ಈಗ ಸ್ವತಂತ್ರವಾಗಿ ಯೋಚಿಸಿ, ತಮ್ಮ ನಿರ್ಧಾರಗಳನ್ನು ತಾವೇ ತೆಗೆದುಕೊಳ್ಳ ಬಲ್ಲವರಾಗಿದ್ದಾರೆ. ಅವರ ಗ್ರಹಿಸುವ ಶಕ್ತಿ ಹೆಚ್ಚಿದೆ ಮತ್ತು ಹೆಚ್ಚಿನ ಶಿಸ್ತು ಅವರಲ್ಲಿ ಕಾಣಿಸುತ್ತಿದೆ. ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳು ವೃದ್ಧಿಯಾಗುತ್ತಿರುವುದನ್ನು ನೋಡುತ್ತಿದ್ದೇವೆ. ಲೈಟ್ ಚಾನಲಿಂಗ್ ತಂತ್ರ ತುಂಬಾ ಉತ್ತಮವಾಗಿದೆ. ನಮ್ಮ ಶಾಲೆಗೆ ಲೈಟ್ ಚಾನಲಿಂಗ್‌ಅನ್ನು ಪರಿಚಯಿಸಿದ್ದಕ್ಕಾಗಿ ಮಾನಸ ಫೌಂಡೇಷನ್‌ಗೆ ವಂದನೆಗಳು.

–ಜಯಂತಿ ಟಿ ಕೆ, ಮುಖ್ಯೋಪಾಧ್ಯಾಯರು, ಸ್ವಾಮಿ ವಿವೇಕಾನಂದ ಹೈಸ್ಕೂಲ್, ಕುವೆಂಪು ನಗರ, ಕುಣಿಗಲ್

ನಾವು 2015-16ರ ಶೈಕ್ಷಣಿಕ ವರ್ಷದಲ್ಲಿ ಪ್ರತಿ ದಿನ 15 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಿದೆವು. ಈ ಲೈಟ್ ಚಾನಲಿಂಗ್‌ನ ಉದ್ದೇಶ ಮಕ್ಕಳಿಗೆ ಯಾವುದೇ ರೀತಿಯ ಅಪಘಾತವಾಗದಿರಲಿ ಮತ್ತು ಅವರು ಬೀಳದಿರಲಿ ಎಂಬುದಾಗಿತ್ತು. ಅದು ಅದ್ಭುತವಾಗಿ ಕೆಲಸ ಮಾಡಿತು. ಹುಷಾರಿಲ್ಲದ ಮಕ್ಕಳಿಗೆ ಒಂದು ಸ್ಥಳದಲ್ಲಿ ಕುಳಿತುಕೊಂಡು 7 ನಿಮಿಷಗಳವರೆಗೆ ಲೈಟ್ ಚಾನಲ್ ಮಾಡುವುದಕ್ಕೆ ಪ್ರೋತ್ಸಾಹಿಸುತ್ತೇವೆ. ಈ ಅಭ್ಯಾಸದ ನಂತರ ಅವರು ಚೇತರಿಸಿಕೊಳ್ಳುತ್ತಾರೆ ಮತ್ತು ತಮ್ಮ ತರಗತಿಗಳಿಗೆ ಹಿಂದಿರುಗುತ್ತಾರೆ.

–ವಿಜಯ, ಮುಖ್ಯೋಪಾಧ್ಯಾಯರು, ಮಹರ್ಷಿ ಅರವಿಂದ್ ಸ್ಕೂಲ್, ಪಂಚಶೀಲ ನಗರ, ಬೆಂಗಳೂರು

ಮಕ್ಕಳು ಮನೆಯಲ್ಲಿ ಲೈಟ್ ಚಾನಲ್ ಮಾಡುವುದನ್ನು ಗಮನಿಸಿದ ಪೋಷಕರು, ತಾವೂ ಕೂಡ ಲೈಟ್ ಚಾನಲ್ ಮಾಡಲು, ಶಾಲೆಯ ನೋಟೀಸ್ ಬೋರ್ಡ್ ಮೇಲೆ ಅಂಟಿಸಿದ ಭಿತ್ತಿ ಪತ್ರವನ್ನು (ಪೋಸ್ಟರ್) ನೋಡಿ ತಂತ್ರವನ್ನು ಬರೆದುಕೊಳ್ಳಲು ಶಾಲೆಗೆ ಭೇಟಿ ನೀಡಿದರು.

–ಮುಖ್ಯೋಪಾಧ್ಯಾಯರು, ಸಾರಕ್ಕಿ ಹಿರಿಯ ಪ್ರಾಥಮಿಕ ಶಾಲೆ, ತಿಗಳರ ಪಾಳ್ಯ, ಬೆಂಗಳೂರು

ನಮ್ಮ ಶಾಲೆಯ ಫಲಿತಾಂಶ ಉತ್ತಮಗೊಂಡಿದೆ. ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ಹತ್ತನೆಯ ತರಗತಿ ವಿದ್ಯಾರ್ಥಿಗಳು ವಿಶೇಷ ತರಬೇತಿಯ ತರಗತಿಯು ಪ್ರಾರಂಭವಾಗುವ ಮೊದಲು 30 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಿದರು.

–ಲಾಜು ಪಿ. ನಾಯಕ್, ಮುಖ್ಯೋಪಾಧ್ಯಾಯರು, ಶ್ರೇಯಸ್ ಹೈಸ್ಕೂಲ್, ಕಾಮಾಕ್ಷಿಪಾಳ್ಯ, ಬೆಂಗಳೂರು

ಲೈಟ್ ಚಾನಲಿಂಗ್ ಒಂದು ಒಳ್ಳೆಯ ಅನುಭವವಾಗಿತ್ತು. ನನ್ನ ಮನಸ್ಸು ಮತ್ತು ಹೃದಯ ಒತ್ತಡಗಳಿಂದ ದೂರವಾಗಿ ಹಗುರವಾದವು. ಯಾವುದೋ ಬೇರೊಂದು ಸ್ಥಳಕ್ಕೆ ಹೋದಂತೆ ಮತ್ತು ಒಂದು ವಿಶೇಷ ಶಕ್ತಿಯೊಂದು ನನ್ನನ್ನು ಆವರಿಸಿದಂತೆ ಅನುಭವವಾಯಿತು. ಪರೀಕ್ಷೆಗಳಲ್ಲಿ ಚೆನ್ನಾಗಿ ಬರೆಯಬಲ್ಲೆನೆಂಬ ಆತ್ಮವಿಶ್ವಾಸ ಮೂಡಿತು.

–ಪ್ರಮಿಳ, ವಿದ್ಯಾರ್ಥಿ, ಟಾರ್ಬ್ಸ್ ಕಮ್ಯೂನಿಟಿ ಕಾಲೇಜ್, ಫ್ರೇಜರ್ ಟೌನ್, ಬೆಂಗಳೂರು

ಲೈಟ್ ಚಾನಲ್ ಮಾಡುವಾಗ, ಬೆಳಕಿನಿಂದ ತುಂಬಿದ ಏನೋ ಒಂದು ನನ್ನ ಶರೀರವನ್ನು ಪ್ರವೇಶಿಸುತ್ತಿರುವಂತೆ ಅನುಭವವಾಯಿತು. ಅದು ಪ್ರವೇಶಿಸಿದ ನಂತರ, ಎಲ್ಲವೂ ಮ್ಯಾಜಿಕ್‌ನಂತೆ ಅನಿಸಿತು. ನನ್ನ ಮನಸ್ಸು ಸಮಾಧಾನ ಹೊಂದಿ ಒತ್ತಡಗಳೆಲ್ಲವೂ ದೂರವಾದವು. ಕೇವಲ ಕ್ಷಣ ಮಾತ್ರದಲ್ಲಿ ಇದೆಲ್ಲಾ ಹೇಗಾಯಿತೆಂದು ಆಶ್ಚರ್ಯವಾಯಿತು!

–ನಾಡಿಯ, ವಿದ್ಯಾರ್ಥಿ, ಟಾರ್ಬ್ಸ್ ಕಮ್ಯೂನಿಟಿ ಕಾಲೇಜ್, ಫ್ರೇಜರ್ ಟೌನ್, ಬೆಂಗಳೂರು

ಬೆಳಿಗ್ಗೆ ಒಬ್ಬರು ನನ್ನನ್ನು ದೂಷಿಸಿದ್ದರು. ಇದರಿಂದ ನನಗೆ ತುಂಬಾ ಬೇಸರವಾಗಿತ್ತು. ಲೈಟ್ ಚಾನಲ್ ಮಾಡಿದ ನಂತರ ಆ ಘಟನೆ ಮರೆತು ಹೋಯಿತು ಹಾಗೂ ಸಂತೋಷವಾಯಿತು.

–ಡ್ಯಾಫ್ನೆ, ವಿದ್ಯಾರ್ಥಿ, ಟಾರ್ಬ್ಸ್ ಕಮ್ಯೂನಿಟಿ ಕಾಲೇಜ್, ಫ್ರೇಜರ್ ಟೌನ್, ಬೆಂಗಳೂರು

ಕಳೆದ ವರ್ಷ, ನಿಯತವಾಗಿಯಲ್ಲದಿದ್ದರೂ ಅನೇಕ ವೇಳೆ ನಾನು ಲೈಟ್ ಚಾನಲ್ ಮಾಡಿದ್ದೇನೆ. ಈ ಹೊಸ ತಂತ್ರವನ್ನು ಕಲಿತ ದಿನದಿಂದ, ನನಗೆ ಎಂಥಹ ಸಮಸ್ಯೆ ಎದುರಾದಾಗಲೂ ಆತ್ಮವಿಶ್ವಾಸದಿಂದಿರಲು ಸಾಧ್ಯವಾಗಿದೆ ಹಾಗೂ ನಾನು ನನ್ನ ಸಮತೋಲನವನ್ನು ಕಳೆದು ಕೊಳ್ಳುವುದಿಲ್ಲ.

–ಮಾರ್ಟಿನಾ, ವಿದ್ಯಾರ್ಥಿ, ಟಾರ್ಬ್ಸ್ ಕಮ್ಯೂನಿಟಿ ಕಾಲೇಜ್, ಫ್ರೇಜರ್ ಟೌನ್, ಬೆಂಗಳೂರು.

**ವಿಶ್ವ ಚಾನಲ್ಸ್ ದಿನವಾದ ಫೆಬ್ರವರಿ 1, 2017ರಂದು 1 ಮಿಲಿಯನ್‌ಗೂ ಹೆಚ್ಚು ಜನರು ಬೆಳಕನ್ನು ಚಾನಲ್ ಮಾಡಿದರು.**

**ನಿಮಗೆಲ್ಲರಿಗೂ ವಂದನೆಗಳು**

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ